

# ವಿದ್ಯಾ ಬಾಂಬ್!

ವಿದ್ಯಾ ಬಾಲನ್‌ಳನ್ನು ನೋಡಿದರೆ ಆಗಲೇ 33 ದಾಟಿದೆ ಎನ್ನಲಾಗದು– ಆ ಮಟ್ಟಿಗೆ ಮೈಮಾಟವನ್ನು ಉಳಿಸಿಕೊಂಡಿರುವುದು ವಿಶೇಷವೇ. ಪಾತ್ರಗಳ ಮಟ್ಟಿಗೂ ಎಲ್ಲ ವರ್ಗಗಳ ಪ್ರೇಕ್ಷಕರಿಗೆ ಇಷ್ಟವಾಗುವ ಆಯ್ಕೆಯೇ ಆಕೆಯದ್ದು. ಆದರೆ ಇನ್ನೇನು ನವೆಂಬರ್ ಮೊದಲ ವಾರದಲ್ಲಿ ತೆರೆಗೆ ಬರಲಿರುವ 'ಡರ್ಟಿ ಪಿಕ್ಚರ್' ಚಿತ್ರದ ಪೋಸ್ಟರ್‌ಗಳು ಮತ್ತು ವೀಡಿಯೊ ತುಣುಕುಗಳನ್ನು ನೋಡಿದರೆ, 'ಅರೆ ಇವಳೇನಾ.. ಪರಿಣೀತಾ ಸಿನಿಮಾದ ವಿದ್ಯಾ!' ಎಂದು ಅಚ್ಚರಿಯೂ ಆಗುತ್ತದೆ. 'ಡರ್ಟಿ ಪಿಕ್ಚರ್' ದಕ್ಷಿಣದ ಒಂದು ಕಾಲದ ಸಿನಿಮಾ ಸೆಕ್ಸ್ ಬಾಂಬ್ ಸಿಲ್ಕ್ ಸ್ಮಿತಾಳ ಜೀವನ ಕಥೆ ಆಧರಿಸಿದ ಚಿತ್ರ. ಸಿಲ್ಕ್ ಸ್ಮಿತಾ ಇದ್ದಾಗ ಅವಳ ಬಿಂದಾಸ್ ನಡವಳಿಕೆಯ ಬಗ್ಗೆ ನೂರೆಂಟು ಕಥೆಗಳು ಹಬ್ಬಿದ್ದವು. 'ಡರ್ಟಿ ಪಿಕ್ಚರ್'ನಲ್ಲೂ ಥೇಟ್ ಸಿಲ್ಕ್ ಸ್ಮಿತಾಳಂತೆಯೇ ವಿದ್ಯಾ ನಟಿಸಿದ್ದಾಳಂತೆ. ಅದರಲ್ಲೂ ಈಕೆ ನಟಿಸಿರುವ ಸೆಕ್ಸಿ ದೃಶ್ಯಗಳು ಅದ್ಭುತವಾಗಿ ಮೂಡಿ ಬಂದಿವೆಯಂತೆ!

ಈ ಚಿತ್ರದಲ್ಲಿ ನಾಸಿರುದ್ದೀನ್ ಶಾ ಜತೆಗೆ ವಿದ್ಯಾ ಕುಣಿದಿರುವ 'ಐಟಂ ಸಾಂಗ್' ಒಂದು ಈಗಾಗಲೆ ಜನಪ್ರಿಯವಾಗಿದೆ. ಊಲಲ್ಲ.. ಉಲಲ್ಲಾ.. ಎಂಬ ಈ ಹಾಡು ಪಡ್ಡೆ ಹುಡುಗರ ಆಸಕ್ತಿಯನ್ನು ಕೆರಳಿಸುವಂತಿದೆ. ಒಂದೆಡೆ ರಜನೀಕಾಂತ್‌ರ ರಾಣಾ ಸಿನಿಮಾದ ಪಾತ್ರ, ಇನ್ನೊಂದೆಡೆ ಅಗ್ನಿಫಥ್ ಚಿತ್ರದ ಮಹತ್ವದ ಪಾತ್ರ– ಹೀಗೆ ವಿದ್ಯಾ ವೈವಿಧ್ಯಮಯ ರೋಲ್‌ಗಳಲ್ಲಿ ಸಖತ್ ಬ್ಯುಸಿ.

'ಡರ್ಟಿ ಪಿಕ್ಚರ್'ನ ಓವರ್‌ಡ್ಯೂಟಿ ಮತ್ತು ಒತ್ತಡದ ಕೆಲಸದಿಂದ ತಲೆ ಸುತ್ತು ಬಂದು ಬಿದ್ದು ಮುಂಬೈಯ ಲೀಲಾವತಿ ಆಸ್ಪತ್ರೆಯಲ್ಲಿ ಮೂರು ದಿನ ಮಲಗಿ ಬಂದ ವಿದ್ಯಾ, ಒಂದು ವಾರ ಮನೆಯಲ್ಲೇ ರೆಸ್ಟ್ ತಗೊಂಡಿದ್ದಳು. ವೈದ್ಯರ ಪ್ರಕಾರ, ವಿದ್ಯಾಗೆ ಅಧಿಕ ಕೆಲಸದ ಒತ್ತಡದಿಂದಾಗಿ ಹಿಮೊಗ್ಲೋಬಿನ್ ಅಂಶ ತೀವ್ರ ಕುಸಿತ ಕಂಡಿತ್ತಂತೆ.

ಇದೀಗ 'ಡರ್ಟಿ ಪಿಕ್ಚರ್' ಚಿತ್ರದ ಉಳಿದ ಶೂಟಿಂಗ್ ಕೆಲಸ ಭರದಿಂದ ಸಾಗಿದೆ. ನವೆಂಬರ್ ಮೊದಲ ವಾರದಲ್ಲಿ ಚಿತ್ರ ತೆರೆಗೆ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಚಿತ್ರ ಬರುವುದಕ್ಕಿಂತ ಮುಂಚೆಯೇ ಕುತೂಹಲ ಹುಟ್ಟಿಸುವಲ್ಲಿ ವಿದ್ಯಾ ಯಶಸ್ವಿಯಾಗಿದ್ದಾಳೆ. 'ಈ ಚಿತ್ರದ ಮೂಲಕ ವಿದ್ಯಾ ಪ್ರೇಕ್ಷಕರ ಮೇಲೆ ಹೊಸ ಬಾಂಬ್ ದಾಳಿ ನಡೆಸಿದ್ದಾಳೆ' ಎನ್ನುವುದು ಅಭಿಮಾನಿಗಳ ನುಡಿ.

■ ಬಿಂದು

